No. ED/KEA/ UGNEET /2025 Date: 06-10-2025

## 3rd Round Seat Allotment to UG Medical and Dental courses – 2025

ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ಉಳಿದಿರುವ ವೈದ್ಯಕೀಯ ಮತ್ತು ದಂತವೈದ್ಯಕೀಯ ಸೀಟುಗಳ ವಿವರಗಳನ್ನು ಹಾಗು ಎರಡನೇ ಸುತ್ತಿನ ನಂತರ ಅಭ್ಯರ್ಥಿಗಳು ರದ್ದು ಪಡಿಸಿಕೊಂಡಿರುವ ಸೀಟುಗಳ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ. ಸದರಿ ಸೀಟುಗಳನ್ನು ಪಡೆಯಲು ಆಸಕ್ತಿ ಇದ್ದಲ್ಲಿ ಅರ್ಹ ಅಭ್ಯರ್ಥಿಗಳು ಯುಜಿನೀಟ್ – 2025 ರ ವೈದ್ಯಕೀಯ ಮತ್ತು ದಂತವೈದ್ಯಕೀಯ ಸೀಟು ಹಂಚಿಕೆಯ ಆನ್‌ಲೈನ್ 3ನೇ ಸುತ್ತಿನಲ್ಲಿ ಭಾಗವಹಿಸಬಹುದು.

### 3ನೇ ಸುತ್ತಿನಲ್ಲಿ ಭಾಗವಹಿಸಲು ಅರ್ಹತೆ:

ಮೊದಲನೆ ಮತ್ತು ಎರಡನೇ ಸುತ್ತಿನಲ್ಲಿ ಯಾವುದೇ ವೈದ್ಯಕೀಯ ಸೀಟು ಹಂಚಿಕೆಯಾಗದ ಅಭ್ಯರ್ಥಿಗಳು ಹಾಗೂ ವೈದ್ಯಕೀಯ ಸೀಟು ಹಂಚಿಕೆಯ ನಂತರ **CAUTION DEPOSIT** ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ ರದ್ದು ಪಡಿಸಿಕೊಂಡಿರುವ ಅಭ್ಯರ್ಥಿಗಳು ಲಭ್ಯವಿರುವ ವೈದ್ಯಕೀಯ ಸೀಟುಗಳಿಗೆ ಆಸಕ್ತಿ ಇದ್ದಲ್ಲಿ 3ನೇ ಸುತ್ತಿನಲ್ಲಿ ಭಾಗವಹಿಸಬಹುದು. ಕೆಇಎ ಮುಖಾಂತರ ಯುಜಿನೀಟ್ 2025ರ ದಂತವೈದ್ಯಕೀಯ ಸೀಟು ಹಂಚಿಕೆಯಾದವರು ವೈದ್ಯಕೀಯ ಸೀಟು ಹಂಚಿಕೆಗಾಗಿ ಮಾತ್ರ ಭಾಗವಹಿಸಬಹುದು ಆದರೆ ಇತರೆ ಕಾಲೇಜುಗಳ ದಂತವೈದ್ಯಕೀಯ ಸೀಟುಗಳನ್ನು ಆಯ್ಕೆ ಮಾಡಿಕೊಳ್ಳಲು ಅರ್ಹರಾಗುವುದಿಲ್ಲ.

### MEDICAL COURSE FEE DEPOSIT and DENTAL CAUTION DEPOSIT

a. ಯುಜಿನೀಟ್ 2025ರ 3ನೇ ಸುತ್ತಿನಲ್ಲಿ ವೈದ್ಯಕೀಯ ಸೀಟುಗಳಿಗೆ ಭಾಗವಹಿಸಲು ಆಸಕ್ತಿ ಇರುವ ಅರ್ಹ ಅಭ್ಯರ್ಥಿಗಳು ಮುಂದಿನ ಪುಟದಲ್ಲಿ ವಿವರಿಸಿರುವಂತೆ **MEDICAL COURSE FEE DEPOSIT** ಪಾವತಿಸಬೇಕು.

b. ಎರಡನೇ ಸುತ್ತಿನಲ್ಲಿ CAUTION DEPOSIT ಅನ್ನು ಪಾವತಿಸಿ ಯಾವುದೇ ಸೀಟು ಹಂಚಿಕೆಯಾಗದವರು ಪಾವತಿಸಿದ್ದ CAUTION DEPOSIT ಅನ್ನು ಕಟಾವು ಮಾಡಿಕೊಂಡು ಉಳಿದ ಮೊತ್ತವನ್ನು ಪಾವತಿಸಬೇಕು.

c. ಈ ಮೊದಲು ಪಾವತಿಸಿದ್ದ CAUTION DEPOSIT ಮೊತ್ತವನ್ನು ವೈದ್ಯಕೀಯ ಸೀಟು ಸಿಗದೆ ಇತರೆ ಕೋರ್ಸಿಗೆ ಹೊಂದಾಣಿಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಈ ಕೆಳಗೆ ವಿವರಿಸಿರುವಂತೆ **MEDICAL COURSE FEE DEPOSIT** ಶುಲ್ಕವನ್ನು ಪಾವತಿಸಿ ಭಾಗವಹಿಸಬಹುದು.

d. **ಇತರೆ ಕೋರ್ಸುಗಳಿಗೆ ಪಾವತಿಸಿರುವ ಮೊತ್ತವನ್ನು MEDICAL COURSE FEE DEPOSIT ಎಂದು ಪರಿಗಣಿಸುವುದಿಲ್ಲ.**

e. 3ನೇ ಸುತ್ತಿನಲ್ಲಿ ವೈದ್ಯಕೀಯ ಸೀಟು ಹಂಚಿಕೆಯಾದಲ್ಲಿ ಅಭ್ಯರ್ಥಿಯು ಪಾವತಿಸುವ **MEDICAL COURSE FEE DEPOSIT** ಅನ್ನು ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

f. 3ನೇ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿ ಅಭ್ಯರ್ಥಿಯು ಕಾಲೇಜಿಗೆ ಪ್ರವೇಶ ಪಡೆಯಲು ವಿಫಲನಾದಲ್ಲಿ ಅಥವಾ ರದ್ದುಗೊಳಿಸಲು ಇಚ್ಛಿಸಿದಲ್ಲಿ ಅಥವಾ ಕಾಲೇಜಿಗೆ ವರದಿ ಮಾಡಿಕೊಳ್ಳದಿದ್ದಲ್ಲಿ ಅಭ್ಯರ್ಥಿಯು ಪಾವತಿಸಿದ್ದ **MEDICAL COURSE FEE DEPOSIT** ಅನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (ನಿಯಮಾನುಸಾರ ದಂಡವನ್ನೂ ಪಾವತಿಸಬೇಕು – ಅಖಿಲ ಭಾರತ ಕೌನ್ಸಿಲಿಂಗ್ ಸೇರಿದಂತೆ ಮುಂದಿನ ವರ್ಷಗಳ ವೈದ್ಯಕೀಯ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅರ್ಹತೆ ಇರುವುದಿಲ್ಲ)

2

## MEDICAL COURSE FEE DEPOSIT DETAILS – *07–10–2025 ರಿಂದ 13–10–2025* ರ ವರೆಗೆ

ಚಲನ್ ಡೌನ್‌ಲೋಡ್ ಮಾಡಿಕೊಳ್ಳುವ ಮೂಲಕ ಪಾವತಿಸುವುದು.

| ವೈದ್ಯಕೀಯ ಸೀಟಿಗೆ ಆಸಕ್ತಿ ಇರುವುದು | ಪಾವತಿಸಿ | ಅಭ್ಯರ್ಥಿಯು ಈ ಕೆಳಗಿನಂತೆ OPTIONS ಗಳನ್ನು ನಮೂದಿಸಲು ಅರ್ಹತೆ ಪಡೆಯುತ್ತಾನೆ / ಳೆ |
|---|---|---|
| 'G' ಸೀಟುಗಳಿಗೆ | Rs. 1,00,000/- | ಎ) ವೈದ್ಯಕೀಯ 'ಜಿ' ಸೀಟುಗಳ OPTIONS ನ್ನು; ಮತ್ತು<br>ಬಿ) * 'ಜಿ', 'ಪಿ', 'ಎನ್', 'ಕ್ಯು' ವರ್ಗಗಳ ದಂತ ವೈದ್ಯಕೀಯ ಸೀಟುಗಳನ್ನು ನಮೂದಿಸಲು ಅನುಮತಿಸಲಾಗುವುದು.<br>(ವ್ಯತ್ಯಾಸದ ಬಾಕಿ ಶುಲ್ಕವನ್ನು ಸೀಟು ಹಂಚಿಕೆಯ ಫಲಿತಾಂಶದ ನಂತರ ಅಭ್ಯರ್ಥಿ ಪಾವತಿಸುವುದು) |
| 'P' ಸೀಟುಗಳಿಗೆ | Rs. 12,00,117/- | 'ಜಿ' ಮತ್ತು 'ಪಿ' ಮತ್ತು ಪ್ರೈವೇಟ್ ಯೂನಿವರ್ಸಿಟಿಯ 'ಪಿ' ವೈದ್ಯಕೀಯ ಸೀಟು ಗಳನ್ನು ನಮೂದಿಸಲು ಅನುಮತಿಸಲಾಗುವುದು. (ವ್ಯತ್ಯಾಸದ ಬಾಕಿ ಶುಲ್ಕವನ್ನು ಸೀಟು ಹಂಚಿಕೆಯ ಫಲಿತಾಂಶದ ನಂತರ ಅಭ್ಯರ್ಥಿ ಪಾವತಿಸುವುದು) |
| 'N' / 'Q' ಸೀಟುಗಳಿಗೆ | Rs. 25,00,000/- | ಎಲ್ಲಾ ರೀತಿಯ ಸೀಟು ಗಳನ್ನು ನಮೂದಿಸಲು ಅನುಮತಿಸಲಾಗುವುದು. (ವ್ಯತ್ಯಾಸದ ಬಾಕಿ ಶುಲ್ಕವನ್ನು ಸೀಟು ಹಂಚಿಕೆಯ ಫಲಿತಾಂಶದ ನಂತರ ಅಭ್ಯರ್ಥಿ ಪಾವತಿಸುವುದು) |
| * ದಂತ ವೈದ್ಯಕೀಯ ಕೋರ್ಸಿಗೆ CAUTION DEPOSIT | | |
| ಎಲ್ಲಾ ತರಹದ ದಂತ ವೈದ್ಯಕೀಯ ಕೋರ್ಸಿಗೆ | Rs. 1,00,000/- | ಎಲ್ಲಾ ರೀತಿಯ ಸೀಟು ಗಳನ್ನು ನಮೂದಿಸಲು ಅನುಮತಿಸಲಾಗುವುದು. (ವ್ಯತ್ಯಾಸದ ಬಾಕಿ ಶುಲ್ಕವನ್ನು ಸೀಟು ಹಂಚಿಕೆಯ ಫಲಿತಾಂಶದ ನಂತರ ಅಭ್ಯರ್ಥಿ ಪಾವತಿಸುವುದು) |

### ಈ ಕೆಳಗಿನ ಸೂಚನೆಗಳನ್ನು ತಪ್ಪದೆ ಓದಿ.

1. ಒಂದನೇ ಸುತ್ತಿನಲ್ಲಿ ವೈದ್ಯಕೀಯ / ದಂತವೈದ್ಯಕೀಯ ಸೀಟು ಪಡೆದು ಯಾವುದೇ ಛಾಯ್ಸ್ ಗಳನ್ನು ಹಾಕದೇ ಇದ್ದವರು ಭಾಗವಹಿಸಲು ಅವಕಾಶ ಇರುವುದಿಲ್ಲ.
2. ಕೆಇಎ ಮೂಲಕ ಯುಜಿನೀಟ್ 2025ರ ಮೊದಲನೇ ಸುತ್ತಿನಲ್ಲಿ (Choice 1 & 2) ಅಥವಾ ಎರಡನೇ ಸುತ್ತಿನಲ್ಲಿ ವೈದ್ಯಕೀಯ ಸೀಟು ಹಂಚಿಕೆಯಾಗಿ ಶುಲ್ಕವನ್ನು ಪಾವತಿಸಿರುವವರು ಅಥವಾ ಪಾವತಿಸದೇ ಇರುವವರು ವೈದ್ಯಕೀಯ ಮತ್ತು ದಂತವೈದ್ಯಕೀಯ **3RD ROUND** ಸುತ್ತಿನಲ್ಲಿ ಭಾಗವಹಿಸಲು ಅರ್ಹರಾಗುವುದಿಲ್ಲ.
3. ಮೊದಲನೇ ಸುತ್ತಿನಲ್ಲಿ Choice-3 ನೀಡಿ ಎರಡನೇ ಸುತ್ತಿನಲ್ಲಿ ವೈದ್ಯಕೀಯ ಸೀಟು ಹಂಚಿಕೆಯಾಗಿ ಶುಲ್ಕವನ್ನು ಪಾವತಿಸಿರುವವರು **3RD ROUND** ಸುತ್ತಿನಲ್ಲಿ ಭಾಗವಹಿಸಲು ಅರ್ಹರಾಗುವುದಿಲ್ಲ.
4. ದಂತ ವೈದ್ಯಕೀಯ ಕಾಲೇಜಿಗೆ ಪ್ರವೇಶ ಪಡೆದಿರುವವರು ಇತರೆ ಕಾಲೇಜುಗಳ ದಂತ ವೈದ್ಯಕೀಯ ಸೀಟಿಗೆ ಭಾಗವಹಿಸಲು ಅರ್ಹತೆ ಇರುವುದಿಲ್ಲ.
5. ಅಖಿಲ ಭಾರತ ಕೋಟದಲ್ಲಿ / ಡೀಮ್ಡ್ ವಿಶ್ವವಿದ್ಯಾಲಯ / ಅಥವಾ ಯಾವುದೇ ಸಂಸ್ಥೆ / ಬೋರ್ಡ್‌ಗಳಿಂದ ಮೊದಲನೇ ಅಥವಾ ಎರಡನೇ ಸುತ್ತಿನಲ್ಲಿ ಯಾವುದೇ ಸೀಟುಗಳಿಗೆ ಹಂಚಿಕೆ ಪಡೆದು ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದಲ್ಲಿ ಯುಜಿನೀಟ್ 2025ರ **3RD ROUND** ಸುತ್ತಿನಲ್ಲಿ ಭಾಗವಹಿಸಲು ಅರ್ಹರಾಗುವುದಿಲ್ಲ.
6. A. ಈಗಾಗಲೇ ಇಂಜಿನಿಯರಿಂಗ್, ಆಯುಷ್ ಹಾಗು ದಂತವೈದ್ಯಕೀಯ ಮತ್ತು ಇತರೆ ಕಾಲೇಜುಗಳಲ್ಲಿ ಪ್ರವೇಶ ಪಡೆದಿರುವ ಅಭ್ಯರ್ಥಿಗಳು ವೈದ್ಯಕೀಯ ಸೀಟುಗಳಲ್ಲಿ ಆಸಕ್ತಿ ಇದ್ದರೆ ಮಾತ್ರ ಮತ್ತು ನಿಗದಿತ ದಿನಾಂಕದೊಳಗೆ ಮೂಲ ದಾಖಲಾತಿಗಳನ್ನು ತಾವು ಅಭ್ಯಸಿಸುತ್ತಿರುವ ಕಾಲೇಜುಗಳಿಂದ ಪಡೆಯುವುದನ್ನು ಖಾತ್ರಿಪಡಿಸಿಕೊಂಡು ಈ ಸುತ್ತಿನಲ್ಲಿ ಭಾಗವಹಿಸಲು ಸೂಚಿಸಿದೆ. ಈ ಸುತ್ತಿನಲ್ಲಿ ಸೀಟು ಹಂಚಿಕೆಯಾದ ತಕ್ಷಣ ಹಿಂದಿನ ಸುತ್ತುಗಳಲ್ಲಿ ಹಂಚಿಕೆಯಾಗಿದ್ದ ಸೀಟು ತನ್ನಷ್ಟಕ್ಕೆ ರದ್ದುಗೊಳ್ಳುತ್ತದೆ ಮತ್ತು ಯಾವುದೇ ಕಾರಣಕ್ಕೂ ಆ ಸೀಟುಗಳನ್ನು ಹಿಂಪಡೆಯಲು ಸಾಧ್ಯವಾಗುವುದಿಲ್ಲ ಹಾಗೂ ಈ ಸುತ್ತಿನಲ್ಲಿ ಹಂಚಿಕೆಯಾಗುವ ಕಾಲೇಜಿಗೆ ಕಡ್ಡಾಯವಾಗಿ ಪ್ರವೇಶವನ್ನು ಪಡೆಯಬೇಕು.

3

B. ಆದರೆ ಪ್ರವೇಶ ಪಡೆದಿರುವ ಕಾಲೇಜುಗಳಿಂದ ಮೂಲ ದಾಖಲೆಗಳನ್ನು ಪಡೆದು ಹೊಸದಾಗಿ ಹಂಚಿಕೆಯಾಗುವ ಕಾಲೇಜುಗಳಿಗೆ ನಿಗದಿತ ಸಮಯದಲ್ಲಿ ನೀಡಿ ಪ್ರವೇಶ ಪಡೆಯುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.

C. ಒಂದು ವೇಳೆ ಈ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಪ್ರವೇಶ ಪಡೆಯದಿದ್ದಲ್ಲಿ ಅಭ್ಯರ್ಥಿಯು ಎರಡೂ ಕಡೆ ಸೀಟು ಕಳೆದು ಕೊಳ್ಳುತ್ತಾನೆ ಯಾವುದೇ ಸೀಟನ್ನು ಹೊಂದಿರುವುದಿಲ್ಲ ಹಾಗು ಯಾವುದೇ ಶುಲ್ಕವನ್ನು ಮರು ಪಾವತಿ ಮಾಡುವುದಿಲ್ಲ.

## ಗಮನಿಸಿ: ವಿಶೇಷ ಸೂಚನೆ

1. ಅಖಿಲ ಭಾರತ ಕೋಟದ ಮೂರನೇ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶದ ನಂತರ ಪ್ರಾಧಿಕಾರದ 3ನೇ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವನ್ನು ಪ್ರಕಟಿಸಲಾಗುತ್ತದೆ.
2. ಮೂರನೇ ಸುತ್ತಿನ ಅಖಿಲ ಭಾರತ ಕೋಟದ ಅಡಿಯಲ್ಲಿ ಭಾಗವಹಿಸಿ ಸೀಟು ಪಡೆದು, ನಂತರ ಕೆಇಎ ನಲ್ಲಿಯೂ 3ನೇ ಸುತ್ತಿನಲ್ಲಿ ಸೀಟನ್ನು ಹಂಚಿಕೆ ಮಾಡಿಕೊಳ್ಳುವವರು ಒಂದು ವೇಳೆ ಪ್ರಾಧಿಕಾರದ ಸೀಟನ್ನು ಉಳಿಸಿಕೊಳ್ಳಲು ಇಚ್ಛಿಸಿದಲ್ಲಿ ಲಿಖಿತವಾಗಿ (ತಾತ್ಕಾಲಿಕ ಫಲಿತಾಂಶದ ನಂತರ ಒಂದು ದಿನದ ಒಳಗೆ) ಕೆಇಎ ನಲ್ಲಿ ಖುದ್ದಾಗಿ ಮನವಿ ನೀಡಿದಲ್ಲಿ ಮಾತ್ರ ಪ್ರಾಧಿಕಾರದ ಸೀಟನ್ನು ಉಳಿಸಿಕೊಳ್ಳಬಹುದು;
3. ಇಲ್ಲದಿದ್ದಲ್ಲಿ ಅಖಿಲ ಭಾರತ ಕೋಟದ ಅಡಿಯಲ್ಲಿ 3ನೇ ಸುತ್ತಿನಲ್ಲಿ ಹಂಚಿಕೆಯಾಗುವ ಅಭ್ಯರ್ಥಿಗಳು ಪ್ರಾಧಿಕಾರದ ಮೂರನೇ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಿದ್ದರೂ ಸಹ ಅಂತಹ ಅಭ್ಯರ್ಥಿಗಳನ್ನು 3ನೇ ಸುತ್ತಿನ ಅಂತಿಮ ಸೀಟು ಹಂಚಿಕೆಗೆ ಪರಿಗಣಿಸುವುದಿಲ್ಲ ಮತ್ತು ಅವರು ಪಾವತಿಸುವ **MEDICAL COURSE FEE DEPOSIT** ಅನ್ನು ಹಿಂದಿರುಗಿಸುವುದಿಲ್ಲ.

## OPTION ENTRY *(07-10-2025 ಪ.12.00 ರಿಂದ 13-10-2025 ರ ಪ.12.00 ರವರೆಗೆ)*

## MEDICAL COURSE FEE DEPOSIT ಮಾಡುವ ಅಭ್ಯರ್ಥಿಗಳು ಮಾತ್ರ ವೈದ್ಯಕೀಯ ಸೀಟುಗಳಿಗೆ OPTION ENTRY ಮಾಡಬಹುದು

a. **'MEDICAL COURSE FEE DEPOSIT'** ಅನ್ನು ಪಾವತಿಸುವ ಎಲ್ಲಾ ಅಭ್ಯರ್ಥಿಗಳನ್ನು ವೈದ್ಯಕೀಯ **OPTIONS** ಗಳನ್ನು ದಾಖಲಿಸಲು ಅನುವು ಮಾಡಿಕೊಡಲಾಗುವುದು.

b. ದಂತ ವೈದ್ಯಕೀಯ ಕೋರ್ಸಿಗೆ ರೂ.1,00,000/- **DEPOSIT** ಅನ್ನು ಪಾವತಿಸಬೇಕು.

c. ಎಲ್ಲಾ ಅಭ್ಯರ್ಥಿಗಳು ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸಿಗೆ ಹೊಸದಾಗಿ **OPTIONS** ಗಳನ್ನು ದಾಖಲಿಸಬೇಕು. ಈ ಮೊದಲು ದಾಖಲಿಸಿದ್ದ **OPTIONS** ಗಳನ್ನು ಪರಿಗಣಿಸುವುದಿಲ್ಲ.

d. ಸೀಟ್ ಮ್ಯಾಟ್ರಿಕ್ಸ್ ಪ್ರಕಟಣೆಯ ನಂತರ ಸೀಟುಗಳು ರದ್ದುಗೊಳ್ಳಬಹುದು ಅಥವಾ ಸೀಟ್ ಮ್ಯಾಟ್ರಿಕ್ಸ್‌ಗೆ ಸೇರಿಸಬಹುದಾದ ಸೀಟುಗಳನ್ನೂ ಸಹ ಹಂಚಿಕೆಗೆ ಪರಿಗಣಿಸಲಾಗುತ್ತದೆ. ಆದ್ದರಿಂದ ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ತೋರಿಸಿರುವ ಸೀಟುಗಳು ಇರಲಿ ಅಥವಾ ಇಲ್ಲದಿರಲಿ, ಅಭ್ಯರ್ಥಿಗಳು ಸೇರಿಕೊಳ್ಳಲು ಆಸಕ್ತಿ ಇರುವ ಎಲ್ಲಾ **OPTIONS** ಗಳನ್ನು ದಾಖಲಿಸಲು ಸೂಚಿಸಲಾಗಿದೆ.

e. ಹೊಸದಾಗಿ ನೋಂದಾಯಿಸಿದ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟಿನಿಂದ ಪರಿಶೀಲನೆ ಸ್ಲಿಪ್ ಅನ್ನು ಡೌನ್‌ಲೋಡ್ ಮಾಡಿಕೊಂಡು ನಂತರ ಇತರ ಅರ್ಹ ಅಭ್ಯರ್ಥಿಗಳೊಂದಿಗೆ ಮಾಪ್-ಅಪ್ ಸುತ್ತಿನಲ್ಲಿ ಭಾಗವಹಿಸಲು ಅರ್ಹರಾಗಲು ಆದ್ಯತೆಯ ಕ್ರಮದಲ್ಲಿ OPTIONS ಗಳನ್ನು ನಮೂದಿಸಬೇಕು.

f. ಶುಲ್ಕದ ವಿನ್ಯಾಸಗಳನ್ನು ತಿಳಿದುಕೊಂಡು ನಂತರ **OPTIONS** ಗಳನ್ನು ದಾಖಲಿಸಿ ಎಂದು ಪ್ರತಿ ಸುತ್ತಿನಲ್ಲಿ ಸಾಕಷ್ಟು ಬಾರಿ ಅಭ್ಯರ್ಥಿಗಳಿಗೆ ಮಾಹಿತಿ ನೀಡಲಾಗುತ್ತಿದೆ. ಆದರೂ ಸಹ ಸೀಟು ಹಂಚಿಕೆಯ ನಂತರ ಶುಲ್ಕದ ವಿವರಗಳು ನಮಗೆ ತಿಳಿದಿಲ್ಲ ಎಂದು ಕೆಲವು ಪೋಷಕರು ಸೀಟು ಬೇಡ ಎಂದು ಪ್ರಾಧಿಕಾರದಲ್ಲಿ ಸೀಟು ರದ್ದುಗೊಳಿಸಲು ಕೋರುತ್ತಿರುವುದು ಕಂಡು ಬಂದಿದೆ. ಆದ್ದರಿಂದ ಅಭ್ಯರ್ಥಿಗಳು ಪ್ರಮುಖವಾಗಿ ಶುಲ್ಕವನ್ನು ಗಮನಿಸಿ ನಂತರ ಕಾಲೇಜು – ಕೋರ್ಸಿಗೆ ಸೇರ ಬಯಸಲು ಆಸಕ್ತಿ ಇರುವ ಆಪ್ಷನ್ಸ್ ಗಳನ್ನು ಮಾತ್ರ ಆದ್ಯತಾ ಕ್ರಮದಲ್ಲಿ ದಾಖಲಿಸಲು ಸೂಚಿಸಿದೆ. ಅಭ್ಯರ್ಥಿಯು, ತನಗೆ ಹಂಚಿಕೆಯಾಗಿರುವ ಕಾಲೇಜು / ಕೋರ್ಸು ಬೇಡ ಅಥವಾ ಸೇರಿಕೊಂಡ ನಂತರ ಆ ಕಾಲೇಜನ್ನು ಬಿಟ್ಟುಬಿಟ್ಟರೆ, ಸಾಮಾಜಿಕ ಹೊಣೆಗಾರಿಕೆಯ ನಿರ್ವಹಣೆಯಲ್ಲಿ ಎಸಗಿದ ಗುರುತರವಾದ ಲೋಪ ಎಂದು ಪರಿಗಣಿಸಲಾಗುವುದು. ಇತರೆ ಅಭ್ಯರ್ಥಿಗಳು ಸರದಿಯಲ್ಲಿ ಸೀಟು ಹಂಚಿಕೆಗಾಗಿ ಕಾಯುತ್ತಿದ್ದಾರೆ ಎಂಬುದನ್ನು ಗಮನಿಸಿ.

g. **3RD ROUND** ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೊದಲು ಅಭ್ಯರ್ಥಿಗಳು ಸೀಟುಗಳ ಲಭ್ಯತೆಯನ್ನು ನೋಡಿ ಹಾಗು ವಿವಿಧ ವರ್ಗಗಳಲ್ಲಿನ ಸೀಟುಗಳ ಶುಲ್ಕವನ್ನೂ ಸಹ ತಿಳಿದುಕೊಂಡು ಭಾಗವಹಿಸಬಹುದಾಗಿದೆ.

h. ಶುಲ್ಕದ ವಿವರಗಳನ್ನು ಕಡ್ಡಾಯವಾಗಿ ತಿಳಿದುಕೊಂಡು ಪೋಷಕರೊಡನೆ ನಿರ್ಧರಿಸಿ ನಂತರ ಈ ಸುತ್ತಿನಲ್ಲಿ ಭಾಗವಹಿಸಲು ಮತ್ತೊಮ್ಮೆ ಸೂಚಿಸಿದೆ.

ಕಾರ್ಯನಿರ್ವಾಹಕ ನಿರ್ದೇಶಕರು